## ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮಎಫ್‌ಸಿ ನ್ಯಾಯಾಲಯ, ಆಳಂದ

## ಸಿ.ಸಿ. ನಂ. 4754/2024

**ಆರೋಪಿತನ ಹೆಸರು**

1. ಶಿವಕುಮಾರ ತಂದೆ ಸೂರ್ಯಕಾಂತ ಖಾನಾಪೂರ,
ವಃ 30 ವರ್ಷ, ಉಃ ಒಕ್ಕಲುತನ,

2. ಶಾಂತಕುಮಾರ ತಂದೆ ಸೂರ್ಯಕಾಂತ ಖಾನಾಪೂರ,
ವಃ 28 ವರ್ಷ, ಉಃ ಒಕ್ಕಲುತನ,

ಇಬ್ಬರು ಸಾಃ ಕುದಮುದ ಗ್ರಾಮ.

**ಃ ಆ ವಾ ದ ನೆ ಃ**

ದಿನಾಂಕ 28.12.2023 ರಂದು ಸಾಯಂಕಾಲ 5.30 ಗಂಟೆ ಸುಮಾರಿಗೆ ನರೋಣಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕುದಮುಡ ಗ್ರಾಮದ ಸಾಕ್ಷಿ ನಂ.1 ಮತ್ತು 4 ರವರ ಹೊಲ ಸರ್ವೆ ನಂ.26 ರಲ್ಲಿ, ಆರೋಪಿತರಾದ ನೀವು ಹೊಲ ಹಂಚಿಕೆಯ ಸಂಬಂಧ ಹಳೆಯ ದ್ವೇಶದಿಂದ, ಸಾಕ್ಷಿ ನಂ.1 ಮತ್ತು ಸಾಕ್ಷಿನಂ.4 ರವರು ತಮ್ಮ ಹೊಲ ಸೆರ್ವ ನೆ.26 ರಲ್ಲಿ ಕೆಲಸ ಮಾಡುತ್ತಿರುವಾಗ, 1 ಮತ್ತು 2ನೇ ಆರೋಪಿತರಾದ ನೀವು ಕೂಡಿಕೊಂಡು ಬಂದು ಸಾಕ್ಷಿ ನಂ.1 ಮತ್ತು 4 ರವರಿಗೆ *"ಸೂಳಿ ಮಕ್ಕಳೆ "*, 1ನೇ ಆರೋಪಿತನಾದ ನೀವು ಸಾಕ್ಷಿ ನಂ.1 ರವರಿಗೆ " ಸೂಳೆ ಮಗ ಏನು ಮಾಡುತ್ತಾನೆ ಮಾಡಿಕೊಳ್ಳಲಿ ಇವರ ಹೊಲದಲ್ಲಿ ಟ್ರ್ಯಾಕ್ಟರ ಹೊಡಿ" ನಂತರ ಸಾಕ್ಷಿ ನಂ.4 ರವರು ಜಗಳ ಬಿಡಿಸಲು ಬಂದಾಗ ಆರೋಪಿತರಾದ ನೀವು ಸಾಕ್ಷಿ ನಂ.4 ರವಳಿಗೆ " ರಂಡಿ ಮಗಳೆ" ಅಂತ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 504 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಎರಡನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2ನೇ ಆರೋಪಿತನಾದ ನೀವು ಸಾಕ್ಷಿ ನಂ.1 ರವರಿಗೆ "*ರಂಡಿ ಮಗನಿಗೆ ಇವತ್ತು ನಿನಗೆ ಜೀವ ಸಹಿತ ಬಿಡುವುದಿಲ್ಲ*" ಅಂತ ಜೀವ ಬೇದರಿಕೆ ಹಾಕಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 506 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಮೂರನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2ನೇ ಆರೋಪಿತನಾದ ನೀವು ಕಲ್ಲಿನಿಂದ ಸಾಕ್ಷಿ ನಂ.1 ರವರಿಗೆ ಬೆನ್ನಿನ ಮೇಲೆ ಹೊಡೆದಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 324 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ನಾಲ್ಕುನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2ನೇ ಆರೋಪಿತನಾದ ನೀವು ಸಾಕ್ಷಿ ನಂ.4 ರವರಿಗೆ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿ ಮಾನಭಂಗಕ್ಕೆ ಯತ್ನಿಸಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 354 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಐದನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2ನೇ ಆರೋಪಿತನಾದ ನೀವು ಸಾಕ್ಷಿ ನಂ.4 ರವರಿಗೆ ಕೈನಿಂದ ಬೆನ್ನ ಮೇಲೆ ಹೊಡೆ ಬಡೆ ಮಾಡಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 323 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಕೊನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2ನೇ ಆರೋಪಿತನಾದ ನೀವು ಸಾಕ್ಷಿ ನಂ.4 ರವರಿಗೆ ಬಲಗಾಲಿನ ಚಪ್ಪಲಿ ತೆಗೆದು ಕಪಾಳ ಮೇಲೆ ಹೊಡೆದಿರುತ್ತೀರಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ.ಕಲಂ 355 ಸಹ ಕಲಂ 34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಪ್ರಶ್ನೆ ಃ ಈ ಮೇಲೆ ಒದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ: ಅ-1:

ಅ-2:

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ: ಅ-1:

ಅ-2:

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ.ಎಫ್.ಸಿ.**
**ನ್ಯಾಯಾಲಯ, ಆಳಂದ.**